## 17. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕಲ್ಕೊಪ್ಪ, ಸೊರಬ

ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕಲ್ಕೊಪ್ಪ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಗಣೇಶನಾಯ್ಕ . ಎನ್, ಸಹ ಶಿಕ್ಷಕರಾದ ಶ್ರೀ ಸಿದ್ಧಾರೂಢ ಹಾಗೂ ಸಿ.ಆರ್.ಪಿ ಶ್ರೀ ಕುಮಾರರವರು ಪ್ರಶಸ್ತಿ ಸ್ವೀಕರಿಸುತ್ತಿರುವುದು.








ಕರ್ನಾಟಕ ಸರ್ಕಾರವು ಗುಣಮಟ್ಟದ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ಮಕ್ಕಳಿಗೆ ವಿನೂತನ ಕಲಿಕಾ ಪ್ರಕ್ರಿಯೆಯನ್ನು ಅನುಷ್ಠಾನಗೊಳಿಸಿತು ಆ ಕಲಿಕಾ ಬೋಧನಾ ಪದ್ಧತಿಯೇ ನಲಿ–ಕಲಿ. 1995–96 ಮೊದಲ ಬಾರಿಗೆ ಮೈಸೂರು ಜಿಲ್ಲೆಯ ಹೆಚ್.ಡಿ ಕೋಟೆ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾಯಿತು. ನಲಿ–ಕಲಿ ಪದ್ಧತಿ ಬಹುವರ್ಗ ಮತ್ತು ಬಹು ಹಂತದ ತರಗತಿ ಪ್ರಕ್ರಿಯೇಯಾಗಿದೆ. ಸ್ವ– ಕಲಿಕೆ, ಸ್ವ–ವೇಗದ ಕಲಿಕೆ, ಸಂತಸದ ಕಲಿಕೆಯಾಗಿದೆ.

### ನಲಿ–ಕಲಿ ಮತ್ತು ಶಿಕ್ಷನ ಹಕ್ಕು ಕಾಯಿದೆ 2009:–

- ಉತ್ತಮ ಕಲಿಕಾ ವಾತಾವರಣ ಕಲ್ಪಿಸುವುದು.
- ಕಲಿಕೆಗೆ ಎಲ್ಲರನ್ನು ಪ್ರೇರೇಪಿಸುವುದು.

☼ ಪ್ರತಿ ಮಗು ತನ್ನದೇ ಆದ ಕಲಿಕಾ ಸಮಯ ರೂಢಿಸಿಕೊಳ್ಳಲು ಅವಕಾಶ ನೀಡುವುದು.

☼ ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ನಡೆಯುವಂತೆ ನೋಡಿಕೊಳ್ಳುವುದು.

☼ಸೃಜನಶೀಲತೆಗೆ ಪ್ರೋತ್ಸಾಹ ನೀಡುವುದು.

## ನಲಿ – ಕಲಿ ವಿಶೇಷತೆ:–

☼ ಬಹುವರ್ಗ, ಬಹುಹಂತದ ಕಲಿಕೆ, ಕಲಿಕಾಂಶಗಳು, ಕಲಿಕಾ ಗೋಪುರ, ಮೈಲುಗಲ್ಲು.

☼ ಕಲಿಕಾ ಏಣಿ, ಲೋಗೋ, ಕಾರ್ಡ್‌ಗಳು, ಪ್ರಗತಿನೋಟ, ಮೆಟ್ಟಿಲು, ವಾಲ್‌ಸ್ಲೇಟ್

☼ ಕಲಿಕಾ ಚಪ್ಪರ, ಗುಂಪು ತಟ್ಟೆ, ಪೊಪೆಟ್ ಶೋ, ದಿನಚರಿ, ನಿರಂತರ ಮತ್ತು ಸಮಗ್ರ ಮೌಲ್ಯಮಾಪನ.

ನಲಿ– ಕಲಿ ಯಶೋಗಾಥೆ 2019–20ನೇ ಸಾಲಿನಲ್ಲಿ ಸಕಾರಿ ಕಿರಿಯ ಪ್ರಾಥಮಿಕ ಶಾಲೆ ಕಲ್ಕೊಪ್ಪ, ಶಕುನವಳ್ಳಿ ಕ್ಲಸ್ಟರ್, ಜಡೆ – ಅಂಚೆ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಪುಟ್ಟದಾದ ಗ್ರಾಮ. ಹಚ್ಚ ಹಸಿರನ್ನು ಹೊದ್ದು ಮಲಗಿರುವ ರಮ್ಯ ಮನೋಹರ ತಾಣ ಮತ್ತು ಸುಂದರ ಉದ್ಯಾನವನ ಹೊಂದಿರುವ ಶಾಲೆಯೇ **ಸಕಾರಿ ಕಿರಿಯ ಪ್ರಾಥಮಿಕ ಶಾಲೆ ಕಲ್ಕೊಪ್ಪ**. ಈ ಶಾಲೆಯಲ್ಲಿ 2 ಜನ ಶಿಕ್ಷಕರಿದ್ದು 1 ರಿಂದ 5ನೇ ತರಗತಿಯವರೆಗೆ ಒಟ್ಟು 40 ಮಕ್ಕಳಿದ್ದಾರೆ. 1ನೇ ತರಗತಿಯಲ್ಲಿ 6, 2ನೇ ತರಗತಿಯಲ್ಲಿ 8, 3ನೇ ತರಗತಿಯಲ್ಲಿ 8 ಒಟ್ಟು 22 ಮಕ್ಕಳು ನಲಿ–ಕಲಿ ತರಗತಿಯಲ್ಲಿದ್ದಾರೆ. ನಲಿ–ಕಲಿ ಬೋಧನಾ ಪದ್ಧತಿಯಲ್ಲಿ ಕೊಠಡಿಯ ಸ್ಥಳಕ್ಕೆ ಅನುಗುಣವಾಗಿ ತಟ್ಟೆಗಳನ್ನು ನೆಲದ ಮೇಲೆ ಬಿಡಿಸಲಾಗಿದೆ. ಮಕ್ಕಳ ಕೈಗೆ ಸಿಗುವ ರೀತಿಯಲ್ಲಿ ಕಲಿಕಾ ಸಾಮಗ್ರಿಗಳನ್ನು ವಿಷಯವಾರು ಜೋಡಿಸಲಾಗಿದೆ. ಮಕ್ಕಳಿಗೆ ಕಾರ್ಡ್‌ಗಳನ್ನು ತೆಗೆಯಲು ಬರುವ ರೀತಿಯಲ್ಲಿ ಚೀಲಗಳನ್ನು ಹೊಂದಿಸಲಾಗಿದೆ. ವಿಷಯವಾರು ಕಾರ್ಡುಗಳನ್ನು ಹಾಕಲು 3 ಬಣ್ಣದ ಚೀಲಗಳನ್ನು ಹೊಂದಿಸಿದೆ. ಪ್ರತಿ ಮಕ್ಕಳಿಗೂ ತಮ್ಮ ಮೆಟ್ಟಿಲುಗಳನ್ನು ಗುರುತಿಸಲು ಕೈಗೆ ಸಿಗುವ ಪ್ರಗತಿ ನೋಡ ಹಾಕಲಾಗಿದೆ. ಹಾಗೆಯೇ ಒಂದರಮೇಲೊಂದರಂತೆ ಮೂರು ತರಗತಿಯ ವಾಚಕಗಳನ್ನು ಹೊಂದಿಸಲಾಗಿದೆ. ತಾವೇ ಬರೆದಿರುವ ಕೈ ಬರಹ, ಚಿತ್ರಪಟ, ಕ್ರಾಫ್ಟ್ ವರ್ಕ್ ವಿವಿಧ ಎಲೆಗಳ ಸಂಗ್ರಹ ಮಕ್ಕಳಿಂದ ರಚಿತ ಪದಗಳು ಕಲಿಕಾ ಚಪ್ಪರದಲ್ಲಿ ಹಾಕಲಾಗಿದೆ. ಪೊಟೆಟ್ ಶೋ, ರೀಡಿಂಗ್ ಕಾರ್ನರ್ ಅಳವಡಿಸಲಾಗಿದೆ. ಕನ್ನಡ, ಇಂಗ್ಲೀಷ್, ಗಣಿತ, ಪರಿಸರ ಅಧ್ಯಯನ ವಿಷಯಗಳಿಗೆ ಪ್ರತ್ಯೇಕವಾದ ನಾಲ್ಕು ಬಣ್ಣದ ಡ್ರಾಯಿಂಗ್ ಶೀಟ್ ಬಳಸಿ ಕಲಿಕಾ ಚಪ್ಪರ ಸಿದ್ಧತೆ ಮಾಡಲಾಗಿದೆ. ಒಟ್ಟಾರೆ ನಲಿ–ಕಲಿ ಬೋಧನಾ ಪ್ರಕ್ರಿಯೆ ಉತ್ತಮವಾಗಿ ಸಂತಸದಿಂದ ಸಾಗುತ್ತಿದೆ.

2018–19 ರಲ್ಲಿ ಸೊರಬ ತಾಲ್ಲೂಕಿನಲ್ಲಿ ನಲಿ–ಕಲಿ ಬೋಧನಾ ವಿಧಾನ ಹೇಗೆ ನಡೆಯುತ್ತಿದೆ? ಎಂದು ಪರಿಶೀಲಿಸಲು ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ನಮ್ಮ ಶಾಲೆಗೆ ಅವಲೋಕನ ಮಾಡಲು ತಂಡ ರಚಿಸಿದ್ದರು ದಿನಾಂಕ 28–03–2019 ರಂದು ಮ್ಯಾಕ್ರೋ ಅಧ್ಯಯನಕ್ಕಾಗಿ ಸೊರಬ ತಾಲ್ಲೂಕಿನ ಹುರುಳಿ ಕ್ಲಸ್ಟರ್‌ನ ಸಿ.ಆರ್.ಪಿ ಶ್ರೀ ಮಂಜುನಾಥ ಮತ್ತು ಶಕುನವಳ್ಳಿ ಕ್ಲಸ್ಟರ್‌ನ ಸಿ.ಆರ್.ಪಿ ಆದ ಶ್ರೀ ಕುಮಾರ ಇವರನ್ನು ನೇಮಿಸಿದ್ದರು. ಮಧ್ಯಾಹ್ನ 1 : 40 ಕ್ಕೆ ಆಗಮಿಸಿ ಶಾಲಾ ಪರಿಸರವನ್ನು ಮೊದಲಿಗೆ ವೀಕ್ಷಣೆ ಮಾಡಿ ನಂತರದಲ್ಲಿ ಮಕ್ಕಳ ಆ ದಿನದ ಹಾಜರಾತಿಯನ್ನು ಪಡೆದುಕೊಂಡು ಪ್ರಗತಿ ನೋಟದಲ್ಲಿ ಮಕ್ಕಳನ್ನು ದಾಖಲಿಸಿರುತ್ತಾರೆ. ಪರಿಸರ ಅಧ್ಯಯನ ತರಗತಿ ವೀಕ್ಷಿಸಿ ಸಲಹೆ ನೀಡಿದರು. ಸಿ.ಆರ್.ಪಿ ಶ್ರೀ ಕುಮಾರರವರು ಪ್ರತಿ ತಿಂಗಳು ಶಾಲೆಗೆ ಭೇಟಿ ನೀಡಿ ನಲಿ–ಕಲಿಗೆ ಸಂಬಂಧಿಸಿದಂತೆ ಕೆಲವು ಸಲಹೆ ಮಾಹಿತಿಗಳನ್ನು ನೀಡುತ್ತಾರೆ. ಇವರ ಮಾರ್ಗದರ್ಶನ ಪಡೆದು ನಲಿ–ಕಲಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಸಿ.ಆರ್.ಪಿ ಶ್ರೀ ಮಂಜುನಾಥರವರು ಕಾರ್ಡುಗಳ ಜೋಡಣೆ, ಕಲಿಕಾ ಸಾಮಗ್ರಿಗಳು, ವಾಚಕಗಳು, ಚಪ್ಪರ, ತಟ್ಟೆ ನಿರ್ವಹಣೆ, ಹವಾಮಾನ ನಕ್ಷೆ, ಪ್ರಗತಿ ನೋಟ, ಅಭ್ಯಾಸ ಪುಸ್ತಕ, ನೋಟ್ ಬುಕ್ ವೀಕ್ಷಿಸಿದರು. ಹಾಗೆಯೇ ಒಂದನೇ ತರಗತಿ ಗಣೇಶ, ಎರಡನೇ ತರಗತಿ ಆಕಾ, ಮೂರನೇ ತರಗತಿ ಪಂಕಜ್ ಇವರು

ಕಲಿಕೆಯಲ್ಲಿ ಹಿಂದುಳಿದಿದ್ದು ವಿಶೇಷವಾಗಿ ಗಮನಹರಿಸುವಂತೆ ತಿಳಿಸಿದರು. ಹವಾಮಾನ ನಕ್ಷೆಯಲ್ಲಿ ಬೆಳಿಗ್ಗೆ, ಸಂಜೆ ಸಮಯದಲ್ಲಾಗುವ ಬದಲಾವಣೆಗಳನ್ನು ಮಕ್ಕಳು ನಮೂದಿಸಿರುವ ಬಗ್ಗೆ ಪ್ರಶಂಸಿಸಿದರು.

## ಫ್ಲೇವುಡ್‌ನಲ್ಲಿ ತಟ್ಟೆಗಳನ್ನು ರಚಿಸುವುದು :-



ಸುಲಭವಾಗಿ ಆಕರ್ಷಣೀಯವಾಗಿ ಕಲಿಕೆ ಸಾಗಲು ಫ್ಲೇವುಡ್‌ನಲ್ಲಿ 5 ತಟ್ಟೆಗಳನ್ನು ಬಣ್ಣ ಬಣ್ಣಗಳಿಂದ ವ್ಯವಸ್ತಿತವಾಗಿ ರಚಿಸಲಾಗಿದೆ. ಇದರಿಮದ ಮಕ್ಕಳು ಅಭ್ಯಾಸ ಮಾಡಲು ತುಂಬಾ ಸಹಕಾರಿಯಾಗಿದೆ. ಹಾಗೂ ಕಲಿಕೆಗೆ ಸಂತಸ ನೀಡುತ್ತದೆ.

## ತರಗತಿವಾರು, ವಿಷಯವಾರು, ರ್‍ಯಾಕ್‌ನಲ್ಲಿ ಕಲಿಕಾ ಸಾಮಗ್ರಿಗಳ ಜೋಡಣೆ:-

ನಲಿ-ಕಲಿ ಬೋಧನಾ ಪದ್ಧರಿಗೆ ಸ್ಥಳೀಯವಾಗಿ ಸಿಗುವ ಮತ್ತು ಶಿಕ್ಷಕರು ಮಕ್ಕಳು ತಯಾರಿಸಿರುವ T. L. M ಗಳನ್ನು ಟ್ರೇನಲ್ಲಿ ವ್ಯವಸ್ಥಿತವಾಗಿ ಕ್ರಮಬದ್ಧವಾಗಿ ಕನ್ನಡ , ಗಣಿತ, ಪರಿಸರ ಅಧ್ಯಯನ ವಿಷಯವಾರು ತರಗತಿವಾರು ಜೋಡಿಸಲಾಗಿದೆ.



## ಆಕೃತಿಗಳಲ್ಲಿ T. L. M ಗಳ ರಚನೆ:-





ವಿಷಯವಾರು T. L. M ಗಳನ್ನು ವೃತ್ತ, ಚಕ್ರದಲ್ಲಿ, ಪದ ಚಾಮರದಲ್ಲಿ, ಐಸ್‌ಕ್ರೀಮ್ ಕಟ್ಟಿಗಳಲ್ಲಿ ತಯಾರಿಸಿರುವುದು.

## ಕಪ್ಪು ಹಲಗೆ ಸಿಂಗಾರಗೊಂಡಿರುವುದು:-



ಕಪ್ಪು ಹಲಗೆ ಮೇಲೆ ಹೂವಿನ ಗುಚ್ಚದಲ್ಲಿ ಅಕ್ಷರ ಮತ್ತು ಅಂಕಿ ಸಂಖ್ಯೆಗಳ ಚಿತ್ತಾರ ಹಾಗೂ ಮೇಲ್ಭಾಗದಲ್ಲಿ ಪ್ರಮುಖ ಚಿತ್ರಪಟಗಳು, ಸಮಾಜ ಸೇವಕರ, ನಾಯಕರ, ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವಚಿತ್ರಗಳಿವೆ.

## ಗಣಿತ ವಿಷಯಕ್ಕೆ ಸಂಬಂಧಿಸಿದ T. L. M ಜೋಡಣೆ:-

ಗಣಿತ ವಿಷಯಕ್ಕೆ ಸಂಬಂಧಿಸಿದಂತೆ ಸರಿ ಸಂಖ್ಯೆ, ಬೆಸ ಸಂಖ್ಯೆ, ಸಮ ಸಂಖ್ಯೆ, ಏರಿಕೆ ಇಳಿಕೆ, ಅಂಕಿ ಸಂಖ್ಯೆಗಳ ಲೆಕ್ಕಗಳು ಹಾಗೂ ಇತರೆ ಸಮಸ್ಯೆಗಳ T. L. M ಗಳನ್ನು ಹಾಳಾದ ಬಳೆ, ಪೇಪರ್ ತಟ್ಟೆಗಳಲ್ಲಿ ತಯಾರಿಸಲಾಗಿದೆ.



## ನಲಿ-ಕಲಿ ಕೊಠಡಿ ಕಲಿಕಾ ಚಪ್ಪರ:-




ಕನ್ನಡ, ಗಣಿತ, ಪರಿಸರ ಅಧ್ಯಯನ, ಇಂಗ್ಲೀಷ್ ವಿಷಯಗಳಿಗೆ ಪ್ರತ್ಯೇಕವಾದ ಏ4 ಅಳತೆ ಬಣ್ಣದ ಡ್ರಾಯಿಂಗ್ ಶೀಟ್ ಬಳಸಿ ಚಪ್ಪರ ಸಿದ್ಧಗೊಳಿಸಲಾಗಿದೆ. ಮಕ್ಕಳಿಂದ ಕ್ರೀಡಾ ಆಲ್ಬಂ, ಕನ್ನಡ ಕವಿಗಳ ಆಲ್ಬಂ, ಪ್ರಾಣಿ ಪಕ್ಷಿಗಳ ಆಲ್ಬಂ, ಗಣಿತ ಘನಾಕೃತಿಗಳ ಆಲ್ಬಂ, ಹಣ್ಣುಗಳ ಆಲ್ಬಂ, ಚಪ್ಪರದಲ್ಲಿ ನೇತುಹಾಕಲಾಗಿದೆ.

## ವಿವಿಧ ವಸ್ತುಗಳಲ್ಲಿ T. L. M ಗಳ ರಚನೆ:-



ಕನ್ನಡ, ಗಣಿತ, ಪರಿಸರ ಅಧ್ಯನ ವಿಷಯಕ್ಕೆ ಸಂಬಂಧಿಸಿದಂತೆ ನಲಿ-ಕಲಿ T. L. M ಗಳನ್ನು ಬಳೆಗಳು, ಐಸ್‌ಕ್ರೀಮ್ ಕಡ್ಡಿಗಳು, ಪೇಪರ್ ತಟ್ಟೆಗಳು, ಥರ್ಮಾಕೋಲ್ ಶೀಟ್ ಹಾಗೂ ಫ್ಲೋರೋಸೆಂಟ್ ಪೇಪರ್‌ಗಳಲ್ಲಿ ತಯಾರಿಸಿ ಪ್ರದರ್ಶಿಸಿರುವುದು.



ನಲಿ-ಕಲಿ ಕೊಠಡಿಯಲ್ಲಿ ಪೊಪೆಟ್ ಶೋ ಪ್ರದರ್ಶನ



**ವಿಶ್ವ ಪರಿಸರ ದಿನಾಚರಣೆ :** ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಕಲ್ಲೊಪ್ಪ ಹಾಗೂ ಶಕುನವಳ್ಳಿ ಕ್ಲಸ್ಟರ್ ನೇತೃತ್ವದಲ್ಲಿ ನಮ್ಮ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಜೂನ್ 5 ರಂದು ಹಮ್ಮಿಕೊಂಡು ಎಲ್ಲಾ ಶಾಲೆಯವರಿಗೂ ಉಚಿತವಾಗಿ ಸಸಿಗಳನ್ನು ವಿತರಿಸಲಾಯಿತು. ಈ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯಿತಿ ಸದಸ್ಯರು, ತಾಲ್ಲೂಕು ಪಂಚಾಯಿತಿ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಸಿ.ಆರ್.ಪಿ ಶ್ರೀ ಕುಮಾರ, ಇ.ಸಿ.ಓ, ಬಿ.ಆರ್.ಸಿ ಸಮನ್ವಯಾಧಿಕಾರಿಗಳು ಹಾಜರಿದ್ದರು.

ಕಲ್ಲೊಪ್ಪ ನಲಿ-ಕಲಿ ಬೋಧನಾ ಪದ್ಧತಿಯಲ್ಲಿ 'A' ಗ್ರೇಡ್ ಹೊಂದಿದ್ದು ಉತ್ತಮ ನಲಿ-ಕಲಿ ಶಾಲೆಯಾಗಲು ಸಹಕರಿಸಿದ ಮಾನ್ಯ ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳು ಹಾಗೂ ಎಲ್ಲಾ ಬಿ.ಆರ್.ಪಿ ಮತ್ತು ಸಿ.ಆರ್.ಪಿ ವೃಂದದವರಿಗೂ ಹೃತ್ಪೂರ್ವಕ ಧನ್ಯವಾಗಳು.